ದಿನಾಂಕ:*12.07.2024* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಕೆ ಎಂ ಜೆ ವಕೀಲರಿಂದ *2* ನೇ ಎದುರುದಾರರ ಪರವಾಗಿ:-</u>

7. ಗಾಳಿಹಳ್ಳಿ ಗ್ರಾಮದ ಸರ್ವೇ ನಂಬರ್ *50/2* ರಲ್ಲಿ *10* ಗುಂಟೆ ವಿಸ್ತೀರ್ಣದ ಕುಶ್ಕಿ ಜಮೀನು ಭೂ ಸ್ವಾಧೀನಗೊಂಡಿದ್ದು, ಅದರ ಪರಿಹಾರದ ಬಾಬ್ತು 13,77,607/- ರೂಪಾಯಿಗಳನ್ನು ಪಡೆದುಕೊಂಡಿದ್ದೀರಿ ಎಂದರೆ ಸರಿ. ಕಲಂ 4(1)ರ ಅಧಿಸೂಚನೆ ದಿಃ 12.12.2012 ರಂದು ಘೋಷಿಸಲ್ಪಟ್ಟಿದ್ದು, ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಸದರಿ ಅಧಿಸೂಚನೆಯ ದಿನಾಂಕಃ 29.11.2012 ಎಂದು ತಪ್ಪಾಗಿ ನಮೂದಿಸಿದ್ದಕೀರಿ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಿಮ್ಮ ಜಮೀನಿಗೆ ಪ್ರತಿ ಗುಂಟೆಗೆ 28,655/- ರೂಪಾಯಿಯನ್ನು ಪರಿಹಾರವಾಗಿ ಕೊಡಲಾಗಿದೆ ಎಂದರೆ ಸರಿ. ಆದರೆ ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಪ್ರತಿ ಗುಂಟೆಗೆ 6,282/- ರೂಪಾಯಿಯನ್ನಲು ಕೊಟ್ಟಿರುವುದಾಗಿ ಸುಳ್ಳು ಹೇಳಿದ್ದೀರಿ ಎಂದರೆ ಸರಿಯಲ್ಲ.
ಸದರಿ ಹಣವನ್ನು ಪಡೆದುಕೊಳ್ಳುವ ಸಮಯಕ್ಕೆ ನೀವು ಸದರಿ ಪರಿಹಾರದ ಹಣ ಕಡಿಮೆ ಆಗಿದೆ ಎಂದು ಹೇಳಿ ಭೂಸ್ವಾಧೀನಾಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಅರ್ಜಿಯನ್ನು ನಾನು ನನ್ನ ವಕೀಲರಿಗೆ ನೀಡಿಲ್ಲ ಮತ್ತು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

8. ಭೂ ಸ್ವಾಧೀನಗೊಂಡ ನಿಮ್ಮ ಜಮೀನು ತರೀಕೆರೆ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದಿಂದ 300 ಮೀಟರ್ ದೂರದಲ್ಲಿದೆ ಮತ್ತು ಎ ಪಿ ಎಂ ಸಿ ಮಾರುಕಟ್ಟೆ, ಮಿನಿ ವಿಧಾನ ಸೌದ, ನ್ಯಾಯಾಲಯದ ಸಂಕೀರ್ಣ, ಉಪಾವಿಭಾಗಾಧಿಕಾರಿಗಳ ಕಛೇರಿ, ಅಗ್ನಿ ಶಾಮಕದ ಕಛೇರಿ ಸದರಿ ಜಮೀನಿನಿಂದ ಸುಮಾರು 1 ಕಿಲೋ ಮೀಟರ್

ಅಂತರದಲ್ಲಿ ಇವೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಭೂ ಸ್ವಾಧೀನಗೊಂಡ ನಿಮ್ಮ ಜಮೀನಿನ ಆಸುಪಾಸಿನಲ್ಲಿ ಹಲವಾರು ಖಾಸಗಿ ಲೇ ಔಟ್ ಗಳು ಇವೆ ಎಂದು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೀರಿ ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಿಮ್ಮ ಜಮೀನಿಗೆ ಹೊಂದಿಕೊಂಡಂತೆ ಬಿ ಹೆಚ್ ರಸ್ತೆ ಮತ್ತು ರಿಂಗ್ ರಸ್ತೆ ಇದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ರಿಂಗ್ ರಸ್ತೆಯನ್ನು ಯಾವಾಗ ನಿರ್ಮಿಸಲಾಗಿದೆ ಎಂದರೆ ಸಾಕ್ಷಿ ಈಗ್ಗೆ 10 ವರ್ಷಗಳ ಹಿಂದೆ ಎನ್ನುತ್ತಾರೆ. ಆ ರೀತಿ 10 ವರ್ಷಗ ಳಹಿಂದೆ ರಿಂಗ್ ರಸ್ತೆಯನ್ನು ನಿರ್ಮಿಸಲಾಗಿದೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಚಿಕ್ಕಮಗಳೂರಿಗೆ ಹೋಗುವ ರಾಜ್ಯ ಹೆದ್ದಾರಿ ನಿಮ್ಮ ಜಮೀನಿನ ಮುಂದೆಯೇ ಹಾದು ಹೋಗಿದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

9. ನಿಮ್ಮ ಜಮೀನಿನ ಸಮೀಪದಲ್ಲಿ ಕರ್ನಾಟಕ ಜಲ ಮಂಡಳಿಯ ನೀರು ಶುದ್ಧೀಕರಣ ಘಟಕ, ಜಲ ಮಂಡಳಿ ಕಛೇರಿ, ಹೆಚ್ ಪಿ ಪೆಟ್ರೋಲ್ ಬಂಕ್. ದೇವರಾಜ ಅರಸ್ ಕಾಲೋನಿ, ಮಾನಸ ಪಿ ಯು ಕಾಲೇಜ್, ಇಂಟರ್ ನ್ಯಾಷನಲ್ ಪಬ್ಲಿಕ್ ಸ್ಕೂಲ್, ಸರ್ಕಾರಿ ಕಾಲೇಜು, ಇನ್ನು ಅನೇಕ ಖಾಸಗಿ ಆಸ್ಪತ್ರೆ ಮತ್ತು ಶಾಲೆಗಳು ನಿಮ್ಮ ಜಮೀನಿಗೆ ಹೊಂದಿಕೊಂಡಂತೆ ಇರುತ್ತವೆ ಎಂದು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಮ್ಮ ಜಮೀನು ಸ್ವಾಧೀನಗೊಂಡ ಸಮಯದಲ್ಲಿ ಪಟ್ಟಣ ಪಂಚಾಯ್ತಿಯ ವ್ಯಾಪ್ತಿಯಲ್ಲಿ ಬರುತ್ತಿರಲಿಲ್ಲ ಎಂದರೆ ಸರಿ. ಬಾಬ ಬುಡನ್ ಗಿರಿ, ಕುದುರೆ ಮುಖ ಹಾಗೂ ಚಿಕ್ಕಮಗಳೂರು ನಗರಕ್ಕೆ ಹೋಗುವ ರಸ್ತೆಯು ಸಹ ನಿಮ್ಮ ಜಮೀನಿಗೆ ಹೊಂದಿಕೊಂಡಂತೆ ಇರುತ್ತದೆ ಎಂದು ನಿಮ್ಮ ಮುಖ್ಯ ವಿಚಾರಣೆಯಲ್ಲಿ

ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

10. ನಿಪಿ.1 ಕ್ರಯ ಪತ್ರ ಗಾಳಿಹಳ್ಳಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನಿಪಿ.1 ನಿವೇಶನ ಖರೀದಿಗೆ ಸಂಬಂಧಿಸಿದ ದಾಖಲೆ ಎಂದರೆ ಸರಿ. ನಿಪಿ.2 ಸಹ ನಿವೇಶನ ಖರೀದಿಗೆ ಸಂಬಂಧಿಸಿದ ದಾಖಲೆ ಎಂದರೆ ಸರಿ. ನಿಪಿ.2 ರಲ್ಲಿ ತೋರಿಸಿರುವ ಸ್ವತ್ತು ಚಿಕ್ಕಮಗಳೂರು ಮುಖ್ಯ ರಸ್ತೆಗ ಹೊಂದಿಕೊಂಡಿದೆ ಎಂದರೆ ಸರಿ. ನಿಪಿ.3 ಕ್ರಯಪತ್ರ ಒಂದು ಗುಂಟೆ ಜಾಗಕ್ಕೆ ಸೇರಿದ್ದು ಅದು ಗಾಳಿಹಳ್ಳಿಯ ಊರಿನೊಳಗೆ ಬರುತ್ತದೆ ಎಂದರೆ ಸರಿ. ನಿಪಿ.1 ರಿಂದ 3 ನಿವೇಶನ ಖರೀದಿಗೆ ಸಂಬಂಧಿಸಿದ ದಾಖಲೆ ಎಂದರೆ ಸರಿ. ಭೂ ಸ್ವಾಧೀನಗೊಂಡಿರುವ ನಿಮ್ಮ ಸ್ವತ್ತು ಕೃಷಿ ಜಮೀನು ಎಂದರೆ ಸರಿ. ಆಗಾಗಿ ನಿಪಿ.1 ರಿಂದ 3 ದಾಖಲೆಗಳು ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ. ಭೂ ಸ್ವಾಧೀನಗೊಂಡ ನನ್ನ ಜಮೀನು ಗಾಳಿಹಳ್ಳಿಯಿಂದ ಸುಮಾರು 300 ಮೀಟರ್ ದೂರದಲ್ಲಿದೆ. ಹಳಿಯೂರು ಗ್ರಾಮಕ್ಕೆ ಪರಿಹಾರವನ್ನು ನೀಡಿರುವಂತೆ ಚದರ ಅಡಿಗೆ 200 ರೂಪಾಯಿ ಪರಿಹಾರ ಕೊಡುವಂತೆ ನೀವು ಕೇಳಿರುವುದು ಅವೈಜ್ಞಾನಿಕವಾಗಿದೆ ಮತ್ತು ಸಮಂಜಸವಲ್ಲ ಎಂದರೆ ಸರಿಯಲ್ಲ.

11. ಹೆಚ್ಚಿನ ಪರಿಹಾರವನ್ನು ಕೋರಿ ನೀವು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಯಾವುದೇ ಸಕಾರಣಗಳು ಇಲ್ಲ ಮತ್ತು ನಿಮ್ಮ ಬೇಡಿಕೆಗೆ ಸಂಬಂಧಿಸಿದಂತೆ ಯಾವುದೇ ಪೂರಕವಾದ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರವನ್ನು ಕೋರಿ ನಿಮ್ಮ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಎಲ್ಲಾ ಸಂಗತಿಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ಅಕ್ರಮ ಲಾಭ ಪಡೆಯುವ ಸಲುವಾಗಿ ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಎಲ್.ಎ.ಸಿ.ಸಂಖ್ಯೆ:219/2018

ಪಿ ಡಬ್ಲೂಃ 1

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.